ಮೂರ್ಖತನವೇ ಸರಿ. ತಾನು ವ್ಯಕ್ತಿಯಷ್ಟೇ ಅಸ್ಥಿರವಾಗಿದ್ದರೂ ನಿರಂತರ ಅಸ್ತಿತ್ವವನ್ನೂ, ಭವಿಷ್ಯತ್ತನ್ನೂ ಊಹಿಸಿಕೊಂಡು, ನಿರ್ಮಿಸಿ ಕೊಳ್ಳುತ್ತಿರುತ್ತದೆ. 'ನಾನು ಈಗ ಇದ್ದೇನೆ, ನಾಳೆಯೂ ಇರುವೆನು' ಎಂದು ತನ್ನ ಸ್ವತಂತ್ರ ಇರುವಿಕೆಯನ್ನು ಕಲ್ಪಿಸಿಕೊಳ್ಳುತ್ತದೆ. ಈ ಮನಸ್ಸು ನೆನಪಿನ ಸಹಾಯದಿಂದ ಭವಿಷ್ಯದ ಹಂಬಲವನ್ನೇ ಜೀವಾಳವಾಗಿರಿಸಿಕೊಂಡು ಬದುಕಲು ಇಚ್ಛಿಸುತ್ತದೆ, ಬದುಕುತ್ತಿದೆ!

ಈ ಅಸ್ಥಿರವಾದ 'ನಾನು'ವೇ ಯಕ್ಷನ ಏಳನೇ ಕೊಪ್ಪರಿಗೆ! ಈ ಅಸ್ಥಿರವಾದ 'ನಾನು' ನಿರ್ಮಿಸಿಕೊಂಡ ಹೊರಗಿನ ಮತ್ತು ಒಳಗಿನ ಪ್ರಪಂಚವೆಲ್ಲ ಈ ಏಳನೇ ಕೊಪ್ಪರಿಗೆ. ಈ 'ನಾನು'ವಿನ ತುಂಬಲಾರದ ಹಂಬಲವೇ ಆ ಏಳನೇ ಕೊಪ್ಪರಿಗೆಯ ಒಂದು ಹಿಡಿಯಷ್ಟು ಬಂಗಾರದ ಕೊರತೆ! ನಿಜವಾಗಿ ನೋಡಿದರೆ ಈ 'ನಾನು' ಕಾಣುವ, ಕೇಳುವ, ಆಶಿಸುವ, ಸೇವೆ ಮಾಡುವ, ಪೂಜಿಸುವ, ಪಡೆಯಬೇಕು, ಆಗಬೇಕು, ಸೇರಬೇಕು ಎನ್ನುವ ಕ್ರಿಯೆಗಳೆಲ್ಲ ಆ ಯಕ್ಷನ ಏಳನೇ ಕೊಪ್ಪರಿಗೆಯ ಬರಿದಾದ ಜಾಗವಾಗಿದೆ! ಈ ನಿಜವನ್ನು ನಾವು ಅರಿತುಕೊಂಡು ತುಂಬಿಸುವ ಪ್ರಯತ್ನವನ್ನು ತ್ಯಜಿಸಿ ಬಂಗಾರದಿಂದ ತುಂಬಿ ಥಳಥಳಿಸುವ ಏಳು ಕೊಪ್ಪರಿಗೆಗಳನ್ನೂ ಇದ್ದಂತೆಯೇ ಉಪಯೋಗಿಸುವುದೇ ಪೂರ್ಣಜೀವನವಲ್ಲವೇ!

ಈ 'ನಾನು'ವನ್ನು ಹಿಡಿಯುವುದು ಮಾತ್ರ ಬಹಳ ಕಷ್ಟಸಾಧ್ಯ. ಹುಡುಕುವವನೂ ಅವನೇ—ಎಂದು ಅಲ್ಲಗಳೆದರೆ ಮತ್ತೆ ಮತ್ತೆ ಅದೇ ಹುಡುಕುವವನೇ ಹುಟ್ಟಿಕೊಳ್ಳುತ್ತಾನೆ. ಈ ಹುಡುಕುವವನೇ ಹುಡುಕಲ್ಪಡುವವನಾಗುತ್ತಿರುವ ಆಟ ಅಂತ್ಯವಿಲ್ಲದೆ ನಡೆಯುತ್ತದೆ. ಆದರೆ ಈ ಹುಡುಕಾಟದ ಓಟವು ವಿಸ್ತಾರ, ವೈಶಾಲ್ಯ ಯಾವುದೂ ಇರದ ಒಂದು ನಿಶ್ಚಿತವಾದ ಕೇಂದ್ರದ ಸುತ್ತ! ತನ್ನ ಬಾಲವನ್ನೇ ನುಂಗಲು ಸುತ್ತುವ ಹಾವಿನಂತೆ. ಆದರೂ, ಈ ಹುಡುಕಾಟದ ಪ್ರಯತ್ನ ಒಮ್ಮೆ ತಾನಾಗಿ ನಿಂತು ಆ 'ನಾನು' ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಆಗ ಇರುವುದೇ ವರ್ತಮಾನ, ಅನಂತದ ಅಸ್ತಿತ್ವ. ಆಗ ಉಳಿಯುವ 'ನಾನು' ಪೂರ್ಣ.

ಕ್ಷೌರಿಕನಿಗೆ ಅರಸ ಹೇಳಿದ: "ಏನಿದು ಮುಗಿಯದ ಹಂಬಲ ನಿನ್ನದು? ಯಕ್ಷನ ಕೊಪ್ಪರಿಗೆ ಪಡೆದಿದ್ದೀಯೋ! ಹೂಂ, ಅದನ್ನು ಮರಳಿಸು." ಆಗ ಆ ರಹಸ್ಯವನ್ನರಿತ ಕ್ಷೌರಿಕನ ತುಂಬುವ ಹಂಬಲವೂ ಕೂಡಲೇ ಮುಗಿದಿತ್ತು! ✡



# ಪ್ರಹಸನ ಪ್ರಸಂಗ

ಯಯಾತಿಯಂತೆ ನಾವೆಲ್ಲರೂ ಚಿರಕಾಲ ಬದುಕಬೇಕು, ಸುಖವನ್ನೇ ಅನುಭವಿಸಬೇಕು ಎಂದು ಆಶಿಸುತ್ತೇವೆ. ಹುಟ್ಟಿದ ಪ್ರತಿಯೊಂದು ಜೀವಿಗೂ ಸಾವು ನಿಶ್ಚಿತವೆಂಬ ಸತ್ಯ ಗೊತ್ತಿದ್ದರೂ ಅದನ್ನು ಮನಸ್ಸಿನ ಯಾವುದೋ ಮೂಲೆಗೆ ತಳ್ಳಿ ನಾವು ಸುಖವಾಗಿದ್ದೇವೆಂಬ ಭ್ರಾಂತಿಯಲ್ಲಿ ಜೀವಿಸುತ್ತಿರುತ್ತೇವೆ.

೧೦೫ ವರ್ಷ ವಯಸ್ಸಾಗಿದ್ದ ಒಬ್ಬ ಮುದುಕ ತಪ್ಪದೆ ಪ್ರತಿ ಭಾನುವಾರದಂದು ಚರ್ಚಿಗೆ ಹೋಗಿ ಪ್ರಾರ್ಥಿಸುತ್ತಿದ್ದ. ಎಲ್ಲರೂ ಅವನ ಧಾರ್ಮಿಕ ನಿಷ್ಠೆಯನ್ನು ಮೆಚ್ಚಿದ್ದರು. ಆದರೆ ಇದ್ದಕ್ಕಿದ್ದಂತೆ ಅವನು ಬರುವುದನ್ನು ನಿಲ್ಲಿಸಿದಾಗ ಚಿಂತೆಗೊಂಡ ಪಾದ್ರಿಗಳು ಅವನನ್ನು ಕಾಣಲು ಬಂದರು. ಆರೋಗ್ಯವಾಗಿಯೇ ಇದ್ದ ಆ ಮುದುಕನನ್ನು ಕಂಡು, "ಇಷ್ಟು ವರ್ಷಗಳ ಕಾಲ ನಿರಂತರವಾಗಿ ಬರುತ್ತಿದ್ದ ತಾವು ಈಗೇಕೆ ಬರುತ್ತಿಲ್ಲ?" ಎಂದು ಪ್ರಶ್ನಿಸಿದರು. ಮುದುಕ ಮೆಲ್ಲನೆ ಉಸುರಿದ, "ಪಾದ್ರಿಗಳೇ! ನೋಡಿ, ನನಗೆ ೯೦ ವಯಸ್ಸಾದಾಗ ಇನ್ನೇನು ಭಗವಂತ ನನ್ನನ್ನು ಕರೆದು ಕೊಂಡುಬಿಡುತ್ತಾನೆ ಎಂದು ತಿಳಿದಿದ್ದೆ. ಆಮೇಲೆ ೯೫ ಆಯಿತು, ೧೦೦ ಆಯಿತು, ಈಗ ೧೦೫ ಆಗಿದೆ. ಹಾಗಾದರೆ ಭಗವಂತ ತನ್ನ ಅನೇಕ ಕೆಲಸಗಳ ಮಧ್ಯೆ ನನ್ನನ್ನು ಮರೆತಿದ್ದಾನೆ ಎಂದನಿಸುತ್ತದೆ. ಅವನಿಗೆ ಜ್ಞಾಪಿಸುವುದು ನನಗೂ ಇಷ್ಟವಿಲ್ಲ."

❖❖❖

ದೇವರನ್ನು ತಿಳಿಯಲು ತಮ್ಮ ಧರ್ಮವೇ ಅತ್ಯುತ್ತಮ ಮಾರ್ಗ, ತಾವು ಮಾತ್ರವೇ ದೇವರ ಅತ್ಯುತ್ತಮ ಪ್ರತಿನಿಧಿಗಳೆಂಬ ಭ್ರಮೆ ಮತಾಂಧರಿಗೆ. ಭಗವಂತನೊಡನೆ ಸಂವಹನ ತಮ್ಮ ಮೂಲಕ ಮಾತ್ರ ಸಾಧ್ಯ ಎನ್ನುತ್ತಾ ದೇವರನ್ನೇ ಸೀಮಿತಗೊಳಿಸುವ ಮತಾಂಧತೆ ಎಷ್ಟು ಅಪಾಯಕಾರಿಯೋ ಅಷ್ಟೇ ಹಾಸ್ಯಾಸ್ಪದ ಕೂಡ !

ಇಸ್ರೇಲಿನ ಯಹೂದ್ಯರ ಪ್ರಧಾನ ಗುರುಗಳಾದ ರಬ್ಬಿ ಒಮ್ಮೆ ಕ್ರೈಸ್ತ ಮತದ ಪ್ರಧಾನ ಗುರುಗಳಾದ ಪೋಪರನ್ನು ಕಾಣಲು ರೋಮಿಗೆ ಬಂದರು. ಪೋಪರ ಕೋಣೆಯಲ್ಲಿ ಒಂದು ಅದ್ಭುತವಾದ ದೂರವಾಣಿ ಯಂತ್ರ ಇರುವುದನ್ನು ಕಂಡು ಅದರ ಉದ್ದೇಶವೇನು ಎಂದು ಕೇಳಿದರು.

"ಅದು ದೇವರೊಂದಿಗೆ ನೇರ ಸಂಪರ್ಕ ಕಲ್ಪಿಸುತ್ತದೆ" ಎಂದು ಪೋಪ್ ಹೇಳಿದಾಗ ರಬ್ಬಿ ಅದನ್ನು ನಂಬಲು ಸಿದ್ಧರಿರಲಿಲ್ಲ. ವಿಶ್ವಾಸ ಮೂಡಿಸಲು ಪೋಪ್, ಯಂತ್ರವನ್ನು ಉಪಯೋಗಿಸುವಂತೆ ಅವರನ್ನು ಒತ್ತಾಯಿಸಿದರು. ರಬ್ಬಿ ಪ್ರಯತ್ನಿಸಿ, ದೇವರೊಂದಿಗೆ ಬಹಳ ಹೊತ್ತು ಮಾತನಾಡಿದರು.

ಮಾತಾಡಿದ ನಂತರ ರಬ್ಬಿ ಹೇಳಿದರು, "ನಾನು ಈ ಕರೆಗೆ ತಗುಲಿದ ವೆಚ್ಚವನ್ನು ಕೊಟ್ಟುಬಿಡುತ್ತೇನೆ." ಪೋಪ್ ಬೇಡವೆಂದರೂ ರಬ್ಬಿ ಬಿಡಲೊಲ್ಲ. ಕಡೆಗೆ ಪೋಪ್ ಲೆಕ್ಕ ಹಾಕಿ ಒಂದು ಲಕ್ಷ ಲೀರಾ (೩,೨೬೪ ರೂಪಾಯಿಗಳು) ಎಂದು ತಿಳಿಸಿದರು. ರಬ್ಬಿ ಕೂಡಲೇ ಹಣವನ್ನು ಸಂತೋಷದಿಂದ ಕೊಟ್ಟರು.

ಕೆಲವು ತಿಂಗಳ ನಂತರ ಜೆರುಸಲೆಂ ನೋಡಲು ಪೋಪ್ ಹೋದಾಗ ರಬ್ಬಿಗಳ ಕೋಣೆಯಲ್ಲೂ ತಮ್ಮಲ್ಲಿರುವಂತಹುದೇ ದೂರವಾಣಿ ಯಂತ್ರವನ್ನು ಕಂಡು, ಅದೂ ಕೂಡ ದೇವರೊಂದಿಗೆ ನೇರ ಸಂಪರ್ಕ ಹೊಂದಿದೆ ಎಂದು ತಿಳಿದುಕೊಂಡರು. ಯಾವುದೋ ವಿಷಯದ ಬಗ್ಗೆ ದೇವರ ಸಲಹೆ ಬೇಕಾಗಿದ್ದು ಪೋಪ್ ದೂರವಾಣಿಯನ್ನು ಉಪಯೋಗಿಸಲು ಬಯಸಿದರು. ರಬ್ಬಿ ಸಂತೋಷದಿಂದ ಒಪ್ಪಿಕೊಂಡು ಯಂತ್ರವನ್ನು ನೀಡಿದರು. ಪೋಪ್ ಬಹಳ ಹೊತ್ತು ದೇವರೊಂದಿಗೆ ಸಮಾಲೋಚನೆ ನಡೆಸಿದ ಅನಂತರ ವೆಚ್ಚವನ್ನು ನೀಡಲು ಮುಂದಾದರು. ರಬ್ಬಿ ಬೇಡವೆಂದರು. ಪೋಪ್ ಒತ್ತಾಯಿಸಿದಾಗ ರಬ್ಬಿ ಲೆಕ್ಕಹಾಕಿ ಕೇವಲ ಎರಡು ಶೆಕೆಲ್ (೨೨ ರೂಪಾಯಿಗಳು) ಎಂದು ತಿಳಿಸಿದರು. ಪೋಪ್‌ಗೆ ಆಶ್ಚರ್ಯವಾಯಿತು. "ಅದು ಹೇಗೆ ಅಷ್ಟು ಕಮ್ಮಿ?" ಎಂದು ಕೇಳಿದರು.

ರಬ್ಬಿ, ನಗುತ್ತ ಉತ್ತರಿಸಿದರು: "ಇದು ಲೋಕಲ್ ಕಾಲ್." ✡